<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>

<u>ನ್ಯಾಯಾಲಯ, ದೇವದುರ್ಗ.</u>

**CC No.497/2024**

**CW-8 PW-8**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನೂರ ನಾಯಕ |
| ತಂದೆ | ಃ | ಹನುಮ ನಾಯಕ |
| ವಯಸ್ಸು | ಃ | 54 |
| ಉದ್ಯೋಗ | ಃ | ಹೆಚ್.ಸಿ |
| ವಾಸಸ್ಥಳ | ಃ | ದೇವದುರ್ಗ ಠಾಣೆ |
| ಪ್ರಮಾಣಿಕರಿಸಿದ ದಿನಾಂಕ | ಃ | **29-11-2025** |

<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.</u>

ನಾನು 2016 ರಿಂದ 2017 ವರೆಗೆ ಪಿ.ಸಿ ದೇವದುರ್ಗ ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕ 13.06.2017 ರಂದು ಆರಕ್ಷಕ ವೃತ್ತ ನಿರೀಕ್ಷಕರು ಈ ಪ್ರಕರಣದಲ್ಲಿನ ಆರೋಪಿತರ ಪತ್ತೆಗಾಗಿ ನನ್ನನ್ನು ಕನ್ಯಾ ಕೊಳೋರು ತಾಂಡ, ಹಳ್ಳಿ ಸಗರ, ಶಿರವಾಳ, ಹಣಬಿ, ಇಟಗಿ ತಾಂಡಾ ತಿರುಗಾಡಿ ಬಾತ್ಮಿದಾರರನ್ನು ಸಂಪರ್ಕಿಸಿದ್ದು ಆರೋಪಿತರ ಬಗ್ಗೆ ಯಾವುದೇ ಮಾಹಿತಿ ಕಂಡು ಬಂದಿರುವುದಿಲ್ಲ ಎಂದು ವೃತ್ತ ನಿರೀಕ್ಷಕರಿಗೆ ಅದೇ ದಿನ ವರದಿ ನೀಡಿರುತ್ತೇನೆ.

ಸದರಿ ವರದಿಯನ್ನು ನಿಪಿ-7 ಎಂದು ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ **VDC** ವಕೀಲರಿಂದ</u>

ಸಿಪಿಐ ಇವರು ಆರೋಪಿತರ ಪತ್ತೆಗಾಗಿ ಮೌಖಿಕ ಆದೇಶ ಮಾಡಿರುತ್ತಾರೆ. ನಾನು ಬಸ್ಸಿನ ಮೂಲಕ ಪ್ರಯಾಣಿಸಿರುತ್ತೇನೆ. ಶಹಪೂರಿನಿಂದ ಕನ್ಯಾ ಕೊಳೋರು ತಾಂಡ 10 ಕಿ.ಮೀ, ಶಹಪೂರಿನಿಂದ ಹಳ್ಳಿ ಸಗರ 7 ಕಿ.ಮಿ, ಶಹಪೂರಿನಿಂದ ಶಿರವಾಳ 8 ಕಿ.ಮೀ, ಶಹಪೂರಿನಿಂದ ಹಣಬಿ 12 ಕಿ.ಮೀ ಮತ್ತು ಶಹಪೂರಿನಿಂದ ಇಟಗಿ ತಾಂಡ 13 ಕಿ.ಮೀ ಅಂತರದಲ್ಲಿ ಇರುತ್ತವೆ. ಸದರಿ ಹಳ್ಳಿಗಳಿಗೆ ಬಸ್ಸ ಸೌಲಭ್ಯ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಶಹಪೂರವರೆಗೆ ನಾನು ಬಸ್ಸು ಮೂಲಕ ಪ್ರಯಾಣಿಸಿ ನಂತರ ದ್ವಿಚಕ್ರ ವಾಹನದ ಮೇಲೆ ಹೋಗಿರುತ್ತೇನೆ. ಮೌಖಿಕ ಆದೇಶ ಮಾಡಿದ ದಿನವೇ ಸದರಿ ಹಳ್ಳಿಗಳನ್ನು ಪರಿಶೀಲನೆ ಮಾಡಿ ಅದೇ ದಿನ ರಾತ್ರಿ 8 ಗಂಟೆಗೆ ನಾನು ವರದಿ ನೀಡಿರುತ್ತೇನೆ.

ದಿನಾಂಕ 13.06.2017 ರಂದು ಆರಕ್ಷಕ ವೃತ್ತ ನಿರೀಕ್ಷಕರು ಈ ಪ್ರಕರಣದಲ್ಲಿನ ಆರೋಪಿತರ ಪತ್ತೆಗಾಗಿ ನನ್ನನ್ನು ಕನ್ಯಾ ಕೊಳೋರು ತಾಂಡ, ಹಳ್ಳಿ ಸಗರ, ಶಿರವಾಳ, ಹಣಬಿ, ಇಟಗಿ ತಾಂಡಾ ತಿರುಗಾಡಿ ಬಾತ್ಮಿದಾರರನ್ನು ಸಂಪರ್ಕಿಸಿದ್ದು ಆರೋಪಿತರ ಬಗ್ಗೆ ಯಾವುದೇ ಮಾಹಿತಿ ಕಂಡು ಬಂದಿರುವುದಿಲ್ಲ ಎಂದು ವೃತ್ತ ನಿರೀಕ್ಷಕರಿಗೆ ಅದೇ ದಿನ ವರದಿ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.